ಅ) ಹೌದು.

ಇ) (೧) ಇದರ ಬಗ್ಗೆ ಪ್ರಸ್ತಾವನೆ ತರಿಸಿಕೊಂಡು ಪರಿಶೀಲಿಸಲಾಗುವುದು.

(೨) ಈಗಾಗಲೇ ಗುಬ್ಬಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಿಸಲು ಸೂಕ್ತ ನಿವೇಶನ ಮಂಜೂರು ಮಾಡಲು ತುಮಕೂರು ಜಿಲ್ಲಾಧಿಕಾರಿಯವರನ್ನು ಕೋರಿದೆ ರಾಜ್ಯದಲ್ಲಿ ಅನೇಕ ಪ್ರದೇಶಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ತರಗತಿಗಳನ್ನು ಸರದಿಯ ಮೇಲೆ ಕಿರಿಯ ಕಾಲೇಜುಗಳಲ್ಲೂ ಹಾಗೂ ಪ್ರೌಢ ಶಾಲೆಗಳಲ್ಲಿ ನಡೆಸಲಾಗುತ್ತಿದೆ. ನಿವೇಶನ ಮಂಜೂರಾದ ನಂತರ ಹಣ ಒದಗಿಸಿ ಸ್ವತಂತ್ರ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆಯಲ್ಲಿ ಪ್ರಥಮ ದರ್ಜೆಗೆ ಕಾಲೇಜು ಕಟ್ಟಡವನ್ನು ಒದಗಿಸುವುದು ಕುರಿತು

೧೯೩೭. ಶ್ರೀ ಎಂ. ಶಿವಣ್ಣ (ಹೆಗಡದೇವನಕೋಟೆ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜು ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಸದರಿ ಕಾಲೇಜಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಸರ್ಕಾರದವರ ಉದ್ದೇಶವಿದೆಯೇ ?

ಇ) ಹಾಗಿದಲ್ಲಿ, ಉದ್ದೇಶಿಸಿರುವ ಅಂದಾಜು ವೆಚ್ಚ ಎಷ್ಟು ?

ಈ) ೧೯೮೭–೮೮ನೇ ಸಾಲಿನಲ್ಲಿ ಹಣ ಒದಗಿಸಲಾಗಿತ್ತೆ ? ಒದಗಿಸಿದ್ದಲ್ಲಿ ಸರ್ಕಾರದವರು ಕ್ರಮವ ಕೈಗೊಂಡಿರುವರೇ ?

ಉ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು)—

ಅ) ಇಲ್ಲ.

ಆ) ಇದೆ.

ಇ) ಕಾಲೇಜು ಕಟ್ಟಡಕ್ಕೆ ರೂ ೩೫ ಲಕ್ಷಗಳ ನಕ್ಷೆ ಮತ್ತು ಅಂದಾಜನ್ನು ತಯಾರಿಸಿದೆ.

ಈ) ೧೯೮೭–೮೮ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಬಾಬಿಗಾಗಿ ರೂ. ೨ ಲಕ್ಷ ಹಣ ಒದಗಿಸಲಾಗಿತ್ತು ಕಾಲೇಜಿಗಾಗಿ ಸೂಕ್ತ ನಿವೇಶನ ಹೊಂದಲು ಕ್ರಮ ತೆಗೆದುಕೊಳ್ಳಲಾಗುತ್ತಿತ್ತು ಮತ್ತು ನಕ್ಷೆ ಹಾಗೂ ಅಂದಾಜನ್ನು ಕೊರಲಾಗಿತ್ತು.

ಉ) ಈಗ ಸದರಿ ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶನ ದೊರೆತಿದ್ದು, ಕಟ್ಟಡದ ನಕ್ಷೆ ಮತ್ತು ಅಂದಾಜಿಗೆ ಆಡಳಿತ ಆನುಮೋದನೆ ನೀಡುವುದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ, ಈ ಬಾಬಿಗಾಗಿ ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ರೂ. ೨ ಲಕ್ಷ ಹಣ ಒದಗಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಬಗ್ಗೆ

೧೯೩೮. ಶ್ರೀಮತಿ ಸುಮಾವಸಂತ (ವಿರಾಜ ಪೇಟೆ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಚೆ ಮತ್ತು ತೆರಪಿನ ಸಂಸ್ಥೆ ಪ್ರಾರಂಭವಾದದ್ದು ಯಾವಾಗ ?

ಅ) ಸದರಿ ಸಂಸ್ಥೆಯು ಇದುವರೆಗಿನ ಆದಾಯ ಮತ್ತು ವೆಚ್ಚವೆಷ್ಟು (ಕಳೆದ ಮೂರು ವರ್ಷಗಳ ವರದಿ ನೀಡುವುದು.

ಇ) ಸದರಿ ಶಿಕ್ಷಣ ಸಂಸ್ಥೆಯವರು ಸ್ವಾಯತ್ತತೆಯನ್ನು ಕೇಳುತ್ತಿರುವುದು ನಿಜವೇ, ಹಾಗಿದ್ದಲ್ಲಿ ಕಾರಣಗಳೇನು ?

ಈ) ಈ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕವನ್ನೇನಾದರೂ ವಿಧಿಸಲಾಗುತ್ತಿದೆಯೇ ?

ಉ) ಈವರೆಗೆ ಶುಲ್ಕವನ್ನು ವಿಧಿಸದಿದ್ದು ಈಗ ಶುಲ್ಕ ವಿಧಿಸುತ್ತಿರುವುದರಿಂದ ಸದರಿ ಪಂಗಡದವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು)—

ಅ) ೧–೧೨–೧೯೬೯.

ಆ)

ವರ್ಷ	ಆದಾಯ	ವೆಚ್ಚ
೧೯೮೫–೮೬	ರೂ. ೬೪,೮೫,೭೦೩–೦೦	೬೬,೯೪,೬೯೬–೦೦
೧೯೮೬–೮೭	ರೂ. ೮೯,೧೧,೮೬೮–೮೦	೧೦೦,೨೨,೫೯೧–೦೦
೧೯೮೭–೮೮	ರೂ. ೮೮,೯೨,೯೮೭–೭೦	೮೫,೭೩,೧೯೫–೩೦

ಇ) ಇಲ್ಲ,

ಈ) ೧೯೮೧–೮೨ನೆಯ ವರ್ಷದಿಂದ ಶುಲ್ಕ ವಿಧಿಸಲಾಗುತ್ತಿದೆ.

ಉ) ಬಂದಿದೆ.

ಊ) ಈ ವಿಷಯವನ್ನು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯು ನಿರ್ದೇಶಕರೊಂದಿಗೆ ಸಮಾಲೋಚಿಸುತ್ತಿದ್ದು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು.

ಬೈಪಾಸ್ ರಸ್ತೆಯ ಬಗ್ಗೆ

೨೨೬೩. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪುತ್ತೂರು ಪಟ್ಟಣದಿಂದ ಹಾದು ಹೋಗುವ ಬೈಪಾಸ್ ರಸ್ತೆಯ ಕಾಮಗಾರಿಯ ಕೆಲಸವನ್ನು ಸರ್ಕಾರ ಇನ್ನು ಕೈಗೊಳ್ಳದೇ ಇರಲು ಕಾರಣಗಳೇನು ?

ಆ) ಹಾಗಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬೈಪಾಸ್ ರಸ್ತೆಗೆ ಬೇಕಾದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಕೆಲಸವು ಪ್ರಗತಿಯಲ್ಲಿದೆ.

ಆ) ಈ ಬೈಪಾಸ್ ರಸ್ತೆಗೆ ಅಗತ್ಯವಿರುವ ಭೂಸ್ವಾಧೀನ ಆದ ನಂತರ ನಿರ್ಮಾಣದ ಕೆಲಸಕ್ಕೆ ಅಂದಾಜು ತಯಾರು ಮಾಡಿ, ಆನಂತರೋದನೆಯಾದ ಮೇಲೆ ಕೈಗೊಳ್ಳಲಾಗುವುದು.